ಒಬ್ಬ ರಾಕ್ಷಸನನ್ನು ಕೊಲ್ಲುವ ಪ್ರಸಂಗವನ್ನು ಹಾಗೇ ಸ್ಥಿರಗೊಳಿಸಿದಳು. ಭಯಾನಕ ಯುದ್ಧದಲ್ಲಿ ದೇವರು ಆ ದೈತ್ಯನನ್ನು ಕೊಂದು ಭೂಮಂಡಲಕ್ಕೆ ಶಾಂತಿಯನ್ನು ಕೊಡುವನಂತೆ ಕೈಮೇಲೆತ್ತಿ ನಿಂತುಕೊಂಡ. ಭೂಮಿಕಾಗೆ ಧೈರ್ಯಬಂದಿತು. ಆಕೆ ಒಮ್ಮಿಂದೊಮ್ಮೆಲೆ ದೇವರನ್ನು ನೆನೆದು ಶತ್ರು ನಾಶಕ್ಕೆ ಸಹಕರಿಸು ಎಂದು ಬೇಡಿಕೊಂಡಳು. ದೆವ್ವ ಭೂತ ಪಿಶಾಚಿಗಳು ಈ ದೇವರನ್ನು ಕಂಡರೆ ಭಯಗೊಳ್ಳುವಂತೆ ತನ್ನ ಮನೆಯ ಸುತ್ತ ನಡೆವ ಗಾಳಿ, ಧಡ್, ಧಡ್ ಶಬ್ದಗಳು ನಿಂತುಕೊಂಡವು. ಎಲ್ಲವೂ ಪವಾಡ ಸದೃಶ ರೀತಿಯಲ್ಲಿ ತಾನು ಅಂದುಕೊಂಡಂತೆ ಜರಗಿದ್ದಕ್ಕೆ ಗಾಬರಿಯಾದಳು. ಒಂದೇ ಒಂದು ಪ್ರಶ್ನೆ ಆಕೆಯಲ್ಲಿ? ದೈತ್ಯನನ್ನು ಸಂಹರಿಸಿದ ದೇವರು ಯಾರ ಪರವಾಗಿ? ತನ್ನ ವಿನಂತಿಯನ್ನು ಭಿನ್ನವಿಸಿ ಅವನನ್ನು ನಾಶ ಮಾಡಿದನೇ? ತಾನೂ ಸಹ ದೈತ್ಯಳೇ? ತನಗೆ ಗೊತ್ತಿರುವ ಸತ್ಯ ಅವನಿಗೂ ಗೊತ್ತಿರಬೇಕಲ್ಲ ಆ ದೇವರಿಗೆ? ಹಾಗಾದರೆ ನಾಶಮಾಡಲೇಬೇಕಾದರೆ ಯಾರನ್ನು ನಾಶಮಾಡಬೇಕು? ತನ್ನನ್ನೆ ಅಥವಾ ಇಲ್ಲೆಲ್ಲೋ ಶಬ್ದ ಹೊರಡಿಸುತ್ತಿರುವ ಅವನನ್ನೆ? ತನ್ನ ಸುತ್ತ ಮಾಯೆ ಇದೆಯೋ ಅಥವಾ ತಾನೇ ಮಾಯೆ ಒಳಗೆ ಇದ್ದೇನೋ ಎಂದು ತಿಳಿಯದಾಯಿತು ಭೂಮಿಕಾಗೆ. ಮುಂಜಾನೆಗೆ ಇನ್ನೂ ಎರಡು ತಾಸುಗಳಿರಬಹುದು... ಭೂಮಿಕಾ ಬೆಳಕಿನತ್ತ ಹೋಗುವಾಗಲೆಲ್ಲ ಗಟ್ಟಿಯಾಗುತ್ತಲೇ ಹೋಗುತ್ತಿದ್ದಳು. ಈ ಮುಂಚಿನ ಸಮಯ ತಾನು ನಂಬಿದ ಸತ್ಯಗಳು ಆ ಕ್ಷಣದ ರಕ್ಷಣೆಗಾಗಿಯೇ ಹೊರತು ಇವಾವು ನಿಖರ ಸತ್ಯಗಳಲ್ಲ ಎಂದು ತನಗೆ ತಾನೆ ಹೇಳಿಕೊಂಡಳು. ಮತ್ತೆ ಗೊಂದಲಕ್ಕೆ ಬಿದ್ದಂತೆ ಫ್ರಿಜ್ ತೆಗೆದು ಮತ್ತೊಂದು ಆ್ಯಪಲ್ ಸುಲಿಯುತ್ತ ಕುಳಿತಳು. ಅದು ಹಾಗೆ ಇರಲಾರದು ಎಂದುಕೊಂಡಳು.

ಆದರೆ ಹಳ್ಳಿಯಿಂದ ಬಂದು ತನ್ನ ಕೆಳಗೆ ಕೆಲಸ ಮಾಡುವ ಈ ಹುಡುಗ? ಅದೇ ಮಹಾದೇವ. ಅವನನ್ನು ಒಂದು ದಿನ ನೋಡದೆ ಇದ್ದರೆ ತಾನು ಯಾಕೆ ಚಡಪಡಿಸುತ್ತೇನೆ ಎನ್ನುವದು ತನ್ನನ್ನು ಇನ್ನೂ ಕಾಡುತ್ತದೆ. ಒಂದು ದಿನ ಸ್ಕಾರ್ಪಿಯೋದಲ್ಲಿ ಪಶ್ಚಿಮ ಘಟ್ಟಗಳ ಕಡೆ ಪ್ರಯಾಣ ಮಾಡುತ್ತಿದ್ದಾಗ, ಮುಂದೆ ಕುಳಿತುಕೊಳ್ಳಲು ಹೋದ ಅವನನ್ನು ತಾನೇ ಪಕ್ಕದಲ್ಲಿ ಕುಳ್ಳಿರಿಸಿಕೊಂಡಳು. ಆತ ಬುಜ ಆನಿಸತೊಡಗಿದ, ಗೊತ್ತಿದ್ದರೂ ಸುಮ್ಮನೆ ಕುಳಿತಳು, ಮೆಲ್ಲಗೆ ತನ್ನ ಎಡಗೈಯನ್ನು ಕೆಳಗೆ ತಂದ, ಸುಮ್ಮನಾದಳು. ಮೌನ ಸಮ್ಮತಿಯಂತೆ ಆತ ಇನ್ನೂ ಆಕ್ರಮಣಶೀಲನಾದ, ಅವಳು ತನ್ನ ಬಾಸು ಎಂದು ಅವ ಮರೆತಿದ್ದ. ಹದಿನೇಳು ವರ್ಷಗಳ ಕಠೋರ ತಪಸ್ಸು ಈ ಮಹಾದೇವನಿಂದ ಮುಗಿಯುವ ಹಂತಕ್ಕೆ ಬಂದಿತ್ತು.

ಥೂ... ನೀನು ಏನು ಅಂದುಕೊಂಡು ಇಲ್ಲಿಗೆ ಬಂದೆ. ಏನು ಮಾಡುತ್ತೀಯಾ? ಎಲ್ಲಾ ಪಾಪಗಳನ್ನು ಈ ಸಮಾಜ ಸೇವೆ ತೊಳೆಯುತ್ತದೆ ಎಂದುಕೊಂಡೇ ಇಲ್ಲಿಗೆ ಬಂದೆ. ಆದರೆ ಮತ್ತೆ ಮೂರನೇ ಬಲಿಗಾಗಿ ನಿನ್ನಲ್ಲಿ ಜಾಲ ಸಿದ್ಧವಾಗಿದೆಯಲ್ಲ?

ಹೌದು. ಅವನು ನನ್ನ ತಪಸ್ಸಿಗೆ ಭಂಗ ತರುವಂತವನು, ಯಕಶ್ಚಿತ ಆ ಸಬಾರ್ಡಿನೇಟ್‌ಗೆ ಎಷ್ಟೆಲ್ಲ ಸ್ವಾತಂತ್ರ್ಯ? ಥೂ. ಅಂದೇ ಅವನು ಅಂಡು ಮುಟ್ಟಲು ಬಂದಾಗ ಒದ್ದು ಕಾರಿನಿಂದ ಹೊರಗೆ ಹಾಕಬೇಕಿತ್ತು. ಭುಜಗಳ ಜುಗಲ್ ಬಂದಿ ಮಾಡಲು ಬಂದಾಗ ಯಡ ಕಿವಿಯನ್ನು ಹಿಡಿದು ಎಳೆದು ಹೊರಗೆ ಹಾಕಬೇಕಾಗಿತ್ತು. ನಾನು ನಿನ್ನ ಹಿರಿಯ ಅಕ್ಕ ಅಥವಾ ತಾಯಿ ಅನ್ನಬೇಕಾಗಿತ್ತು. ತಾನು ಅನ್ನಲಿಲ್ಲವಲ್ಲ? ಯಾಕೆಂದರೆ ತನ್ನ ಸುಳ್ಳುಗಳು ತನ್ನ ಆಳದಲ್ಲಿರುವ ವಂಚನೆ, ಆತ್ಮಸಾಕ್ಷಿಗಳು ಎಲ್ಲವೂ ತನಗೆ ಗೊತ್ತಿಲ್ಲದೆ ತನ್ನನ್ನು ಆಳುತ್ತಿರಬಹುದೆ. ಉಪದೇಶಕ್ಕಾಗಿ ತನ್ನೊಳಗಿನ ಒಬ್ಬನನ್ನು ಉಪದೇಶ ಧಿಕ್ಕರಿಸಲಿಕ್ಕಾಗಿ ಇನ್ನೊಂದು ಮನಸ್ಸನ್ನು ತಾನೇ ಸೃಷ್ಟಿಸಿಕೊಂಡಿರುವೆನೆ? ಅಥವಾ ಇವೆಲ್ಲವೂ ಕೃತಕ ಕರ್ಮಶಾಲೆಯಲ್ಲಿ ಅರಳಿರುವ ಉಪಭೋಗಗಳೇ? ಎಂದು ಯೋಚಿಸಿದಳು.

ಸೂರ್ಯ ಎಳೆ ಎಳೆಯಾಗಿ ಮನೆಯ ಒಳಗೆ ಬಂದಿದ್ದ. ಎಷ್ಟು ನಿಖರ ಕಿರಣಗಳು ಅವು... ನೀರು ತುಂಬಿದ ಆ ಟಬ್ಬಿನೊಳಗೆ ನೇರವಾಗಿ ಸೂರ್ಯ ಇಳಿದಿದ್ದಾನೆ, ನೀರಿನ ಒಳಗೆ ನೇರವಾಗಿ ಏಕೆ ಹೋಗಲಿಲ್ಲ? ನೀರಿನ ಎರಡನೆ ಪದರೊಳಗೆ ಹೋಗಬೇಕಾದರೆ ವಕ್ರ ವಕ್ರವಾಗೇ ಹೋಗುತ್ತಿದ್ದಾನೆ.

ಮೊದಲನೆಯವನು ಹೇಳುತ್ತಿದ್ದ, 'ನೀರಿಗೆ ನೆರಳಿದೆ'. ಸೂರ್ಯ ನೆರಳಿನ ಮುಖಾಂತರ ವಕ್ರೀಭವನ ಸೃಷ್ಟಿಸುತ್ತಾನೆ. ಎರಡನೆಯವನು ಹೇಳುತ್ತಿದ್ದ, 'ನೀರಿಗೆ ನೆರಳಿಲ್ಲ. ಅದು ಪಾರದರ್ಶಕ. ಜಲ ಯಾವಾಗಲೂ ಟ್ರಾನ್ಸ್‌ಪೇರೆಂಟ್'.